8

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ಮಂಡಿಸಿರುವ ನಿಯಮ 72 ರ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಸೂಚನೆ: ರಾಜ್ಯ ಸರ್ಕಾರಿ ನೌಕರರನ್ನು ವಿವಿಧ ಕಾರಣಗಳಿಂದ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತುಗೊಳಿಸಿದ ಆರು ತಿಂಗಳ ನಂತರ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತು ಆದೇಶವನ್ನು ತೆರವುಗೊಳಿಸಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದ ಸ್ಥಳದಿಂದ ಬೇರೆ ಜಾಗಕ್ಕೆ ಸ್ಥಳ ನಿಯುಕ್ತಿಗೊಳಿಸಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸಿಆಸುಇ 52 ಸೇಇವಿ 2020 ದಿನಾಂಕ 25/11/2020 ರ ನಿಯಮದಲ್ಲಿ ಹೇಳಲಾಗಿದೆ. ಆದರೆ ಕಿಶೋರ್ ಕುಮಾರ್. ಬಿ.ಕೆ, ಪೊಲೀಸ್ ಇನ್ಸ್‌ಪೆಕ್ಟರ್ (ಐಎಸ್‌ಡಿ) ಬೆಂಗಳೂರು ಇವರನ್ನು ದಿನಾಂಕ : 15/10/2022 ರಂದು ಇವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತುಗೊಳಿಸಲಾಗಿದ್ದು ಇವರ ಅಮಾನತ್ತು ಆದೇಶವನ್ನು ಸಿಆಸುಇ ನಿಯಮದಂತೆ ಇದುವರೆವಿಗೂ ತೆರವುಗೊಳಿಸಿರುವುದಿಲ್ಲ. ಇವರು ಅಮಾನತ್ತು ತೆರವುಗೊಳಿಸದೇ ಇರುವುದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಹೋಗಿದ್ದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇವರ ಅಮಾನತ್ತನ್ನು ತೆರವುಗೊಳಿಸಿ ಸ್ಥಳ ನಿಯುಕ್ತಿಗೊಳಿಸವುಂತೆ ಆದೇಶ ಮಾಡಿದ್ದರು ಸಹ ಇದುವರೆವಿಗೆ ಹೈಕೋರ್ಟ್ ಆದೇಶವನ್ನು ಪಾಲಿಸದೇ ಉಲ್ಲಂಘಿಸಿರುವ ಗೃಹ ಇಲಾಖೆಯ ಮತ್ತು ಪೊಲೀಸ್ ಮಹಾ ನಿರ್ದೇಶಕರ ಕಛೇರಿಯ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಂಡು ಹೈಕೋರ್ಟ್ ಆದೇಶದಂತೆ ಇವರ ಅಮಾನತ್ತು ಆದೇಶವನ್ನು ರದ್ದುಗೊಳಿಸಿ ಸ್ಥಳನಿಯುಕ್ತಿಗೊಳಿಸಿ ಆದೇಶ ಹೊರಡಿಸುವಂತೆ ಹಾಗೂ ಅನ್ಯಾಯಕ್ಕೊಳಗಾಗಿರುವ ಪೊಲೀಸ್ ಅಧಿಕಾರಿಗೆ ನ್ಯಾಯ ನೀಡಬೇಕೆಂಬ ವಿಷಯದ ಬಗ್ಗೆ ಮಾನ್ಯ ಗೃಹ ಸಚಿವರ ಗಮನ ಸೆಳೆದಿರುತ್ತಾರೆ.**

ಶ್ರೀ ಶ್ರೀಧರ್ ಬಿನ್ ಶಾಮಣ್ಣ, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು ಎಂಬುವವರು ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಪಿಎಸಿಎಲ್ ಕಂಪನಿ ವಿರುದ್ಧ ಸಿಬಿಐ ಮತ್ತು ಇ.ಡಿ ಇಲಾಖೆಗಳು ತನಿಖೆ ಮಾಡಿ ಅಕ್ರಮ ಹಣ ವರ್ಗಾವಣೆ ಮತ್ತು ಸಾರ್ವಜನಿಕರಿಗೆ ಮಾಡುತ್ತಿರುವ ವಂಚನೆ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಗಮನಕ್ಕೆ ತಂದಿದ್ದು, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಾರ್ವಜನಿಕರಿಗೆ ಜಮೀನುಗಳನ್ನು ಭೂಮಾಲಿಕತ್ವದ ಬಗ್ಗೆ ಆದೇಶವನ್ನು ನೀಡಿ, ನ್ಯಾಯಾಧೀಶ ಜಾ-ಲೋಧ ಸಮಿತಿ ರಚನೆ ಮಾಡಿದ್ದು, ಸದರಿ ಪಿ.ಎ.ಸಿ.ಎಲ್ ಕಂಪನಿಯು ಸುಮಾರು 05 ಕೋಟಿ ಜನರಿಂದ ರೂ. 49,100 ಕೋಟಿ ಹಣ ಸಂಗ್ರಹಣ ಮಾಡಿ ವಂಚಿಸಿದ್ದನ್ನು ತನಿಖೆ ಮೂಲಕ ತಿಳಿದು ಪಿಎಸಿಎಲ್ ಕಂಪನಿಗೆ ಸಂಬಂಧಿಸಿದ ಆಸ್ತಿಯನ್ನು ಸರ್ವೋಚ್ಛ ನ್ಯಾಯಾಲಯವು ತಮ್ಮ ಸುಪರ್ದಿಗೆ ಪಡೆದು ಹಣ ಕಳೆದುಕೊಂಡ ಸಾರ್ವಜನಿಕರಿಗೆ ಹಿಂದುರುಗಿಸುವಂತೆ ಆದೇಶ ನೀಡಿದ್ದು, ಈ ಬಗ್ಗೆ ನ್ಯಾಯಾಧೀಶರು ಜಾ-ಲೋಧ ಸಮಿತಿಯನ್ನು ರಚನೆ ಮಾಡಿ ಜಮೀನುಗಳನ್ನು ಮತ್ತು ಭೂಮಾಲಿಕತ್ವವನ್ನು ಅನುಮತಿ ಇಲ್ಲದೆ ಯಾವೊಬ್ಬ ಸಬ್ ರಿಜಿಸ್ಟ್ರಾರ್ ಪರಭಾರೆ ಮಾಡಬಾರದೆಂದು ಸೂಚಿಸಿದ್ದರೂ ಕೂಡಾ, ಮಂಜುನಾಥ ಬಿ ಎಸ್ ಎಂಬುವವನು ಪಿಎಸಿಎಲ್.ಗೆ ಸೇರಿದ ಜಾಗವನ್ನು ನಕಲಿ ದಾಖಲೆ ಸೃಷ್ಟಿಸಿ ಸಬ್ ರಿಜಿಸ್ಟ್ರಾರ್‌ಗಳಿಗೆ ನೀಡಿ, ಕ್ರಯಪತ್ರವನ್ನು ಮಾಡಿಸಿರುತ್ತಾರೆಂದು ಎಂಬಿತ್ಯಾದಿಯಾಗಿ ಆರೋಪಿಸಿದ ಹಿನ್ನಲೆಯಲ್ಲಿ ಅತ್ತಿಬೆಲೆ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ: 356/2022 ಕಲಂ 420, 421, 423, 424, 120 (ಬಿ), 456, 467, 468 ಜೊತೆಗೆ 149 ಐಪಿಸಿ 7 (ಎ), 7 (ಸಿ) ಭ್ರಷ್ಟಾಚಾರ ತಡೆ ಕಾಯ್ದೆ, 1988 ಪ್ರಕರಣ ದಾಖಲಾಗಿರುತ್ತದೆ.

ಶ್ರೀ ಬಿ.ಕೆ ಕಿಶೋರ್ ಕುಮಾರ್, ಪೊಲೀಸ್ ನಿರೀಕ್ಷಕರವರು ಆಂತರಿಕ ಭದ್ರತಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಶ್ರೀಧರ್ ಎಂಬ ವ್ಯಕ್ತಿಗೆ ಅತ್ತಿಬೆಲೆ ಪೊಲೀಸ್ ಠಾಣೆಯ

ಮೊಕದ್ದಮೆ ಸಂಖ್ಯೆ:356/2022 ಕಲಂ 420, 421, 423, 424, 120 (ಬಿ), 456, 467, 468 ಜೊತೆಗೆ 149 ಐಪಿಸಿ 7 (ಎ), 7 (ಸಿ) ಭ್ರಷ್ಟಾಚಾರ ತಡೆ ಕಾಯ್ದೆ, 1988 ಪ್ರಕರಣಕ್ಕೆ ಸಂಬಂಧಪಟ್ಟಂತೆ ಶ್ರೀ ಬಿ.ಕೆ ಕಿಶೋರ್ ಕುಮಾರ್ ರವರು ದಿನಾಂಕ: 20/09/2022 ರಂದು ತನಗೆ ದೂರವಾಣಿ ಮುಖಾಂತರ ಬೆದರಿಕೆ ಒಡ್ಡಿದ್ದು, ಸದರಿ ಪಿಐ ರವರು ಈ ಪ್ರಕರಣದ ಆರೋಪಿ-1 ಮತ್ತು ಆರೋಪಿ-3 ಆದ ಮಂಜುನಾಥ ಮತ್ತು ಚಂದ್ರಮೋಹನ್ ಎಂಬುವವರೊಂದಿಗೆ ಸಂಪರ್ಕದಲ್ಲಿರುವುದು ತನಿಖೆಯಲ್ಲಿ ಕಂಡುಬಂದ ಹಿನ್ನೆಲೆಯಲ್ಲಿ ತನಿಖಾಧಿಕಾರಿಗಳು ಮೇಲ್ಕಂಡ ಪ್ರಕರಣದಲ್ಲಿ ಶ್ರೀ ಬಿ.ಕೆ ಕಿಶೋರ್ ಕುಮಾರ್ ರವರನ್ನು ಆರೋಪಿ-12 ಎಂದು ಎಫ್.ಐ.ಆರ್ ನಲ್ಲಿ ನಮೂದಿಸಿ, ದಿನಾಂಕ:29/09/2022 ರಂದು ಎರಡು ಮೊಬೈಲ್‌ಗಳನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿಸುವಂತೆ ನೋಟೀಸ್ ನೀಡಲಾಗಿರುತ್ತದೆ. ಆದರೆ, ಪಿಐ ಶ್ರೀ ಬಿ ಕೆ ಕಿಶೋರ್ ಕುಮಾರ್ ರವರು ತಮ್ಮ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ತಲೆಮರೆಸಿಕೊಂಡಿರುತ್ತಾರೆ. ಪಿ.ಐ ರವರು ದಿನಾಂಕ:27/09/2022 ರಿಂದ 30/09/2022 ರವರೆಗೆ 4 ದಿನಗಳ ಕಾಲ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಿಸಿಕೊಂಡು ತೆರಳಿದ್ದು, ನಂತರ ದಿನಾಂಕ: 01/10/2022 ರಿಂದ 31/10/2022 ರವರೆಗೆ 31 ದಿನಗಳ ಗಳಿಕೆ ರಜೆ ಕೋರಿದ್ದು, ಈ ರಜೆಯು ಮೇಲಾಧಿಕಾರಿಗಳಿಂದ ಮಂಜೂರಾಗಿರುವುದಿಲ್ಲ. ಮುಂದುವರೆದು, ಇವರನ್ನು ದಿನಾಂಕ:03/10/2022 ರಿಂದ 05/10/2022 ರವರೆಗೆ ದಸರಾ ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಿದ್ದು, ಈ ಕರ್ತವ್ಯಕ್ಕೂ ಕೂಡ ಹಾಜರಾಗದೆ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿ ಮೇಲಧಿಕಾರಿಗಳ ಆದೇಶವನ್ನು ಉಲ್ಲಂಘಿಸಿದ ಕಾರಣ ಎಡಿಜಿಪಿ., ಆಂತರಿಕ ಭದ್ರತಾ ವಿಭಾಗ ರವರು ದಿನಾಂಕ: 15/10/2022 ರಂದು ಶ್ರೀ ಬಿ.ಕೆ ಕಿಶೋರ್ ಕುಮಾರ್, ಪಿಐ ರವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿ ಸದರಿ ಅಮಾನತ್ತಿನ ಆದೇಶವನ್ನು ದಿನಾಂಕ:19/10/2022 ರಂದು ಸ್ಥಿರೀಕರಿಸಿ, ಅಮಾನತ್ತಿನ ಲೀನ್ ಅನ್ನು ಐಎಸ್‌ಡಿ ಯಲ್ಲಿಯೇ ಮುಂದರಿಸಲಾಗಿರುತ್ತದೆ.

ನಂತರ, ಎಡಿಜಿಪಿ, ಐಎಸ್‌ಡಿ ರವರು ಡಿವೈಎಸ್‌ಪಿ, ಪಶ್ಚಿಮ ವಿಭಾಗ, ಐಎಸ್‌ಡಿ, ಬೆಂಗಳೂರು ರವರಿಂದ ಪೂರ್ವಭಾವಿ ವಿಚಾರಣೆ ನಡೆಸಿ, ಆರೋಪಿತ ಪೊಲೀಸ್ ಅಧಿಕಾರಿ ಶ್ರೀ ಬಿ.ಕೆ ಕಿಶೋರ್ ಕುಮಾರ್, ಪಿಐ ರವರ ವಿರುದ್ಧ ಮಾಡಲಾದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಯವರ ವಿರುದ್ಧ ದಿನಾಂಕ: 17/03/2023 ರಂದು ಕೆಎಸ್‌ಪಿ (ಡಿಪಿ) ನಿಯಮಗಳು, 1965/89ರ ನಿಯಮ 6 ರ ಪ್ರಕಾರ ಇಲಾಖಾ ವಿಚಾರಣೆಗೆ ಆದೇಶಿಸಿ ಡಿವೈಎಸ್‌ಪಿ, ಇಲಾಖಾ ವಿಚಾರಣೆಗಳು, ಕೇಂದ್ರ ವಲಯ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿರುತ್ತದೆ.

ಈ ಮಧ್ಯೆ ಶ್ರೀ ಬಿ ಕೆ ಕಿಶೋರ್ ಕುಮಾರ್, ಪಿಐ ರವರು ದಿನಾಂಕ:20/06/2023 ರಂದು ಮನವಿ ಸಲ್ಲಿಸಿ ತನ್ನನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಈ ಸಂಬಂಧ ಐಜಿಪಿ., ಕೇಂದ್ರ ವಲಯ, ಬೆಂಗಳೂರು ರವರಿಂದ ಅಭಿಪ್ರಾಯ ಕೋರಲಾಗಿ, ಸದರಿ ಪಿಐ ರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಇರುವುದರಿಂದ, ಇವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸಬಾರದೆಂದು ಅಭಿಪ್ರಾಯ ನೀಡಿದ್ದು ಅದರನ್ವಯ ಶ್ರೀ ಬಿ.ಕೆ ಕಿಶೋರ್ ಕುಮಾರ್ ರವರನ್ನು ಅಮಾನತ್ತಿನಿಂದ ಬಿಡುಗಡೆಗೊಳಸಿರುವುದಿಲ್ಲ.

ಮುಂದುವರೆದು, ಶ್ರೀ ಬಿ.ಕೆ ಕಿಶೋರ್ ಕುಮಾರ್, ಪಿಐ ರವರು ತನ್ನನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸುವಂತೆ ಕೋರಿ ಕೆಎಸ್‌ಎಟಿಯಲ್ಲಿ ಅರ್ಜಿ ಸಂಖ್ಯೆ:3106/2023 ಅನ್ನು ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಧಿಕರಣವು ದಿನಾಂಕ: 11/09/2023 ರಂದು ಹೊರಡಿಸಿದ ಆದೇಶದಲ್ಲಿ, ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿ, ಅರ್ಜಿದಾರರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸುವ ಬಗ್ಗೆ, ಅಥವಾ ಮುಂದುವರೆಸುವ ಬಗ್ಗೆ, ಸರ್ಕಾರದ ಹಂತದಲ್ಲಿ ಕ್ರಮ ಕೈಗೊಳ್ಳಬೇಕೆಂದು ಆದೇಶಿಸಿರುತ್ತದೆ.

ಮಾನ್ಯ ಕೆಎಸ್‌ಎಟಿ ಯ ಆದೇಶದನ್ವಯ ಆರೋಪಿ ಪೊಲೀಸ್ ಅಧಿಕಾರಿ ಶ್ರೀ ಬಿ.ಕೆ ಕಿಶೋರ್ ಕುಮಾರ್, ಪಿಐ ರವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸುವ / ಮುಂದುವರೆಸುವ ಕುರಿತು ಸೂಕ್ತ ಸಮರ್ಥನೆ / ಸ್ಪಷ್ಟ ಅಭಿಪ್ರಾಯವನ್ನು ಸಲ್ಲಿಸುವಂತೆ ಐಜಿಪಿ., ಕೇಂದ್ರ ವಲಯ, ಬೆಂಗಳೂರು ಕೋರಲಾಗಿ, ಐಜಿಪಿ., ಕೇಂದ್ರ ವಲಯ ರವರು ದಿನಾಂಕ:02/02/2024 ರಂದು ವರದಿ ಸಲ್ಲಿಸಿ, ಅತ್ತಿಬೆಲೆ ಪೊಲೀಸ್ ಠಾಣೆ ಮೊ.ಸಂ:356/2022 ಪ್ರಕರಣದಲ್ಲಿನ ಆರೋಪಿಗಳ ಪೈಕಿ 11 ಮತ್ತು 13 ನೇ ಆರೋಪಿಗಳು ಬಿ ಕೆ ಕಿಶೋರ್ ಕುಮಾರ್, ಪಿಐ ರವರಿಗೆ ಸ್ವತಃ ಸಹೋದರರಾಗಿದ್ದು, ಇವರ ವಿರುದ್ಧವೂ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿರುವುದರಿಂದ, ಇವರುಗಳು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗದಂತೆ ಶ್ರೀ ಬಿ.ಕೆ ಕಿಶೋರ್ ಕುಮಾರ್, ಪಿಐ ರವರು ಹಸ್ತಕ್ಷೇಪ ಮಾಡಬಹುದೆಂಬ ಅಂಶವು ವ್ಯಕ್ತಪಟ್ಟ ಹಿನ್ನೆಲೆಯಲ್ಲಿ ಹಾಗೂ ಸ್ವತಃ ಶ್ರೀ ಬಿ ಕೆ ಕಿಶೋರ್ ಕುಮಾರ್, ಪಿಐ ರವರು ಈ ಪ್ರಕರಣದಲ್ಲಿ ಆರೋಪಿ-12 ಆಗಿರುವುದರಿಂದ, ಸಧ್ಯದ ಮಟ್ಟಿಗೆ ಆರೋಪಿ ಪೊಲೀಸ್ ಅಧಿಕಾರಿ ಶ್ರೀ ಬಿ.ಕೆ ಕಿಶೋರ್ ಕುಮಾರ್, ಪಿಐ ರವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸದೆ ಅಮಾನತ್ತಿನಲ್ಲಿಯೇ ಮುಂದುವರೆಸುವುದು ಸೂಕ್ತವೆಂದು ಅಭಿಪ್ರಾಯ ನೀಡಿರುತ್ತಾರೆ.

ಈ ಮಧ್ಯೆ ಆರೋಪಿ ಪೊಲೀಸ್ ಅಧಿಕಾರಿ ಶ್ರೀ ಬಿ.ಕೆ ಕಿಶೋರ್ ಕುಮಾರ್, ಪಿಐ ರವರು ತಮ್ಮ ವಿರುದ್ಧ ಆದೇಶಿಸಲಾದ ಇಲಾಖಾ ವಿಚಾರಣೆಯ ದಿನಾಂಕ:17/03/2023 ರ ಆದೇಶದ ವಿರುದ್ಧ ಮತ್ತು ಅಮಾನತ್ತಿನ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 25080/2023 ಸಿ/ಡಬ್ಲ್ಯೂ ರಿಟ್ ಅರ್ಜಿ ಸಂಖ್ಯೆ: 18983/2024 ಅನ್ನು ದಾಖಲಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಗಳನ್ನು ವಿಚಾರಣೆ ನಡೆಸಿ, ದಿನಾಂಕ: 10/03/2025 ರಂದು ಅಮಾನತ್ತಿನ ಆದೇಶವನ್ನು ಹಾಗೂ ಇಲಾಖಾ ವಿಚಾರಣೆ ಆದೇಶವನ್ನು ಮತ್ತು ವಿಚಾರಣಾಧಿಕಾರಿಗಳು ದಿನಾಂಕ: 05/04/2023 ರಂದು ಹೊರಡಿದ್ದ ದೋಷಾರೋಪಣಾ ಪತ್ರವನ್ನು ರದ್ದುಗೊಳಿಸಿ ಆದೇಶಿಸಿರುತ್ತದೆ.

ಮುಂದುರವರೆದು, ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು ರವರು ಹೆಚ್ಚುವರಿ ಸರ್ಕಾರಿ ವಕೀಲರು, ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ ರವರಿಗೆ ನ್ಯಾಯದ ಹಿತದೃಷ್ಟಿಯಿಂದ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:25080/2023 ಸಿ/ಡಬ್ಲ್ಯೂ 18983/2024 ರಲ್ಲಿ ದಿನಾಂಕ: 10/03/2025 ರಂದು ನೀಡಲಾದ ತೀರ್ಪನ್ನು ಪರಿಶೀಲಿಸಲು, ರಿವ್ಯೂ ಅರ್ಜಿಯನ್ನು ಸಲ್ಲಿಸುವಂತೆ ಕೋರಿರುತ್ತಾರೆ. ಸದರಿ ಪೊಲೀಸ್ ನಿರೀಕ್ಷಕರವರು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯಕ್ಕೆ ಸಮನಾಗಬಹುದಾದ ಸಂಗತಿಗಳನ್ನು ತಪ್ಪಾಗಿ ನಿರೂಪಿಸಿದ್ದಾರೆ ಮತ್ತು ನಿಗ್ರಹಿಸಿದ್ದಾರೆ. ಅತ್ತಿಬೆಲೆ ಪೊಲೀಸ್ ಠಾಣಾ ಮೊ.ಸಂ:356/2022 ರಲ್ಲಿ ಸದರಿಯವರ ವಿರುದ್ಧದ ಕ್ರಿಮಿನಲ್ ಆರೋಪಗಳನ್ನು ಮಾನ್ಯ ಉಚ್ಚ ನ್ಯಾಯಾಲಯವು ರದ್ದುಗೊಳಿಸಿದೆ ಎಂದು ನಂಬುವಂತೆ ಮಾನ್ಯ ಉಚ್ಚ ನ್ಯಾಯಾಲಯವನ್ನು ದಾರಿ ತಪ್ಪಿಸಿದ್ದಾರೆ ಎಂದು ತಿಳಿಸುತ್ತಾ, ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 10/03/2025 ರ ಆದೇಶ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ರಿವ್ಯೂ ಪಿಟಿಷನ್ ಸಂಖ್ಯೆ: 342/2025 ಅನ್ನು ಸಲ್ಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಸದರಿ ರಿವ್ಯೂ ಪಿಟಿಷನ್ ಜೊತೆಗೆ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ:610/2025, ರಿಟ್ ಪಿಟಿಷನ್ ಸಂಖ್ಯೆ:25080/2023 ಮತ್ತು ರಿಟ್ ಪಿಟಿಷನ್ ಸಂಖ್ಯೆ:18983/2024 ಗಳನ್ನು ಒಟ್ಟುಗೂಡಿಸಿ ವಿಚಾರಣೆ ನಡೆಸಿ, ದಿನಾಂಕ:07/01/2026 ರಂದು ಹೊರಡಿಸಿದ ಅಂತಿಮ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:25080/2023 ಜೊತೆಗೆ 18983/2024 ರಲ್ಲಿ ದಿನಾಂಕ:10/03/2025 ರಂದು ಹೊರಡಿಸಿದ ಆದೇಶವನ್ನು ರದ್ದುಗೊಳಿಸಿ ಅರ್ಜಿದಾರರು ಮೂರು ವರ್ಷ ಅವಧಿಗಿಂತ ಮೇಲ್ಪಟ್ಟು ಅಮಾನತ್ತಿನಲ್ಲಿ ಇರುವುದರಿಂದ, ಇವರ ವಿರುದ್ಧ ಆದೇಶಿಸಲಾಗಿರುವ ಇಲಾಖಾ

ವಿಚಾರಣೆಯನ್ನು ಮುಂದುವರೆಸಿ, ಸದರಿಯವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸುವಂತೆ ಆದೇಶಿಸಿರುತ್ತದೆ ಹಾಗೂ ಸದರಿ ಪಿಐ ರವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಕುರಿತು ನಿಯಮಾನುಸಾರ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ನಿರ್ದೇಶಿರುತ್ತದೆ.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ವಿಭಾಗಿಯ ಪೀಠದ ದಿನಾಂಕ:07/01/2026 ರ ತೀರ್ಪಿನಂತೆ ಆರೋಪಿತ ಪೊಲೀಸ್ ಅಧಿಕಾರಿ ಶ್ರೀ ಬಿ ಕೆ ಕಿಶೋರ್ ಕುಮಾರ್, ಪಿಐ ರವರನ್ನು ದಿನಾಂಕ:22/01/2026 ರ ಈ ಕಛೇರಿಯ ಆದೇಶದಲ್ಲಿ ಅಮಾನತ್ತಿನಿಂದ ಬಿಡುಗಡೆಗೊಳಿಸಿ, ಡಿಎಸ್‌ಬಿ., ಕೆಜಿಎಫ್ ಘಟಕಕ್ಕೆ ಸ್ಥಳ ನಿಯುಕ್ತಿಗೊಳಿಸಲಾಗಿರುತ್ತದೆ.

ಮುಂದುವರೆದು, ಸದರಿ ಆರೋಪಿತ ಪೊಲೀಸ್ ಅಧಿಕಾರಿಯವರ ವಿರುದ್ಧ ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಮೊ.ಸಂ: 356/2022 ಕಲಂ 420, 421, 423, 424, 120 (ಬಿ), 456, 467, 468 ಜೊತೆಗೆ 149 ಐಪಿಸಿ 7 (ಎ), 7 (ಸಿ) ಭ್ರಷ್ಟಾಚಾರ ತಡೆ ಕಾಯ್ದೆ, 1988 ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಎಸ್‌ಎಲ್‌ಪಿ ಸಂಖ್ಯೆ:2049/2023 ರಲ್ಲಿನ ಪ್ರಕರಣದ ಅರ್ಜಿಯಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುವ ಕಾರಣದಿಂದ ಇವರ ವಿರುದ್ಧ ಕೆಎಸ್‌ಪಿ (ಡಿಪಿ) ನಿಯಮಗಳು, 1965/89 ರ ನಿಯಮ 6 ರ ಪ್ರಕಾರ ದಿನಾಂಕ:06/11/2025 ರಂದು ಇಲಾಖಾ ವಿಚಾರಣೆಗೆ ಆದೇಶಿಸಿ, ಶ್ರೀ ಜೆ ಎಸ್ ಸೋಮಶೇಖರ್, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಸದರಿ ಇಲಾಖಾ ವಿಚಾರಣಾ ಆದೇಶದ ವಿರುದ್ಧ ಆರೋಪಿತ ಪೊಲೀಸ್ ಅಧಿಕಾರಿ ರವರು ಕೆ.ಎಸ್.ಎ.ಟಿ ಯಲ್ಲಿ ಅರ್ಜಿ ಸಂಖ್ಯೆ:4777/2025 ನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ವಿಚಾರಣೆಯಲ್ಲಿರುತ್ತದೆ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆರೋಪಿ ಪೊಲೀಸ್ ಅಧಿಕಾರಿ ಶ್ರೀ ಬಿ ಕೆ ಕಿಶೋರ್ ಕುಮಾರ್ ರವರನ್ನು ಅಮಾನತ್ತಿನಿಂದ ಬಿಡುಗಡೆಗೊಳಿಸಿದರೂ ಸಹ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಗಳು ಹಾಗೂ ಕ್ರಿಮಿನಲ್ ಪ್ರಕರಣಗಳೂ ಸಹ ಬಾಕಿ ಇರುವುದರಿಂದ, ಇವರನ್ನು ಪ್ರಸ್ತುತ ಡಿವೈಎಸ್‌ಪಿ ಹುದ್ದೆಗೆ ಮುಂಬಡ್ತಿಗೆ ಪರಿಗಣಿಸಲು ನಿಯಮಾನುಸಾರ ಅವಕಾಶವಿರುವುದಿಲ್ಲ.

ಸಂಖ್ಯೆ: ಹೆಚ್‌ಡಿ 29 ಪಿಇಎಂ 2026

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು